ಇ) ಇದು ರಾಜ್ಯದ ಒಪ್ಪಿತ ವೆಚ್ಚವಾದ್ದರಿಂದ, ಅನುದಾನವನ್ನು ಹಂತ ಹಂತವಾಗಿ ಬಿಡುಗಡೆಗೊಳಿಸಲಾಗುವುದು.

ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ-ಜನರೇಷನ್ ಘಟಕದ ಸ್ಥಾಪನೆ

2266 (2794) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋಜನರೇಷನ್ ಘಟಕ ಸ್ಥಾಪಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಕೋ-ಜನರೇಷನ್ ಘಟಕದ ಸ್ಥಾಪನೆಯ ಅಂದಾಜು ವೆಚ್ಚವೆಷ್ಟು;

ಇ) ಈ ಘಟಕಕ್ಕೆ ಸಂಪನ್ಮೂಲದ ಮೂಲಗಳು ಯಾವುವು;

ಈ) ಈ ಘಟಕದ ಕಾಮಗಾರಿ ನಿರೀಕ್ಷಿತ ಗತಿಯಲ್ಲಿ ಅನುಷ್ಠಾನಗೊಳ್ಳದೇ ಇರದ ಕಾರಣಗಳೇನು;

ಉ) ಈ ಕಾಮಗಾರಿಯು ಮುಗಿದು ಕೋ-ಜನರೇಷನ್ ಘಟಕ ಯಾವಾಗ ಪ್ರಾರಂಭಿಸಲಾಗುವುದು;

ಶ್ರೀ ಎಂ. ಮಹದೇವ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಸ್ಥಾಪಿಸಲಾಗುತ್ತಿದೆ

ಆ) ಅಂದಾಜು ವೆಚ್ಚ 76.35 ಕೋಟಿ ರೂ.

ಇ) ಹುಡ್ಕೋ ಸಾಲ 57.25 ಕೋಟಿ ರೂ. ಇದರಲ್ಲಿ 23.21 ಕೋಟಿ ಬಿಡುಗಡೆ ಮಾಡಿರುತ್ತಾರೆ. ಸರ್ಕಾರದ ಕೊಡುಗೆ 5 ಕೋಟಿ ರೂ. 3.51 ಕೋಟಿ ಬಿಡುಗಡೆ ಮಾಡಿರುತ್ತಾರೆ. ಕಂಪನಿಯ ಕೊಡುಗೆ ರೂ. 25 ಕೋಟಿ.

ಈ) ಕಂಪನಿಯ ವಿದ್ಯುತ್ ಘಟಕದ ಯೋಜನೆಗೆ ಕಂಪನಿಯ ಪಾಲನ್ನು ನೀಡಲು ರೂ. 15 ಕೋಟಿ ಮೊತ್ತದ ಡಿಬೆಂಚರ್‌ಗಳನ್ನು ಖಾಸಗಿ ಬಂಡವಾಳದಾರರಿಂದ ಪಡೆಯಲಾಯ್ತು. ಈ ಹಣವನ್ನು ಉಪಯೋಗಿಸಿಕೊಳ್ಳಲು ಕಂಪನಿ, ಸರ್ಕಾರ ಹಾಗೂ ಟ್ರಸ್ಟಿಗಳನ್ನೊಳಗೊಂಡ ತ್ರಿಪಕ್ಷೀಯ ಒಪ್ಪಂದವನ್ನು ಸಹಿಮಾಡಬೇಕಿತ್ತು. ಈ ಒಪ್ಪಂದದಲ್ಲಿ ಡಿಬೆಂಚರ್ ಮೇಲಿನ ವಾರ್ಷಿಕ ಬಡ್ಡಿ ಪಾವತಿಗೆ ಸರ್ಕಾರವು ತನ್ನ ಆಯವ್ಯಯದಲ್ಲಿ ಅವಕಾಶ ಮಾಡಿಕೊಡಬೇಕೆಂಬುದು ಒಂದು ಷರತ್ತು ಆಗಿರುತ್ತದೆ. ಆದರೆ ಸರ್ಕಾರವು ಆಯವ್ಯಯದಲ್ಲಿ ಈ ಸಂಬಂಧ ಅವಕಾಶ ಮಾಡಿಕೊಡಲು ಒಪ್ಪದ ಕಾರಣ ತ್ರಿಪಕ್ಷೀಯ ಒಪ್ಪಂದವು ಏರ್ಪಟ್ಟಿಲ್ಲ. ತ್ರಿಪಕ್ಷೀಯ ಒಪ್ಪಂದವು ಏರ್ಪಡದೆ ಇರುವ ಕಾರಣ ಹಣವನ್ನು ತೆಗೆದುಕೊಂಡು ಉಪಯೋಗಿಸಿಕೊಳ್ಳಲು ಸಾಧ್ಯವಾಗದ ಕಾರಣ ಕಾಮಗಾರಿ ಮತ್ತು ಇತರ ಕೆಲಸಗಳು ಸ್ಥಗಿತಗೊಂಡವು.

ಈ ಸಂಬಂಧವಾಗಿ ಖಾಸಗಿ ಬಂಡವಾಳದಾರರ ಸಭೆಯನ್ನು 12.5.2003ರಂದು ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಬಂಡವಾಳದಾರರಿಗೆ 31.3.2003ರ ವರೆಗಿನ ಬಡ್ಡಿಯನ್ನು ಪಾವತಿಸಬೇಕೆಂದು ಮತ್ತು ಐಸಿಆರ್‌ಎ ರವರಿಂದ ರೀ-ರೇಟಿಂಗ್ ಪಡೆಯಬೇಕೆಂದು ತೀರ್ಮಾನಿಸಲಾಯಿತು. ಬಂಡವಾಳದಾರರಿಗೆ ಬಡ್ಡಿ ಹಣವನ್ನು ನೀಡಲು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. ಈ ಮಧ್ಯೆ ಕಂಪನಿಯ ನಿವ್ವಳ ಬೆಲೆಯು ಪೂರ್ತಿಯಾಗಿ ನಷ್ಟಹೊಂದಿರುವ ಕಾರಣ ರೀ-ರೇಟಿಂಗ್ ಪಡೆಯಲು ಸಾಧ್ಯವಾಗಿಲ್ಲ.

ಈ) 04.07.2003ರಂದು ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು. ನಿರ್ದೇಶಕರ ಮಂಡಳಿಯು ವ್ಯವಸ್ಥಾಪಕ ನಿರ್ದೇಶಕರಿಗೆ ಅತಿ ಹೆಚ್ಚು ಬಂಡವಾಳ ಹೂಡಿರುವ ಖಾಸಗಿ ಬಂಡವಾಳದಾರರಾದ ಮೆಃಸಹರಾ ಇಂಡಿಯ, ಬಾಂಬೆ ಇವರನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಯಿತು. ಅದರಂತೆ ವ್ಯವಸ್ಥಾಪಕ ನಿರ್ದೇಶಕರು ಕ್ರಮ ವಹಿಸಲಿದ್ದಾರೆ.

ಉ) ಈ ಮೇಲಿನ ಕ್ರಮಗಳನ್ನು ವಹಿಸಿದ ನಂತರ ಕಾಮಗಾರಿಯು ಮತ್ತು ಇತರ ಕೆಲಸಗಳು ಮುಗಿದು ಕೋ–ಜನರೇಷನ್ ಘಟಕವನ್ನು ನವೆಂಬರ್:ಡಿಸೆಂಬರ್ 2003ರ ತಿಂಗಳಿನಲ್ಲಿ ಪ್ರಾರಂಭಿಸುವ ಸಾಧ್ಯತೆ ಇರುತ್ತದೆ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಪಾವತಿ ಬಗ್ಗೆ

2267 (2785) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಪಾವತಿ ಮಾಡಬೇಕಾಗಿರುವ ಸಹಾಯ ಧನವೆಷ್ಟು;

ಆ) ಈ ಸಹಾಯ ಧನವನ್ನು ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಅದರ ವಿವರ ನೀಡುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ದಿನಾಂಕ: 31.3.03ರ ಅಂತ್ಯಕ್ಕೆ 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿ ರೂ.ಗಳ ಸಹಾಯ ಧನವನ್ನು ಪಾವತಿ ಮಾಡಬೇಕಾಗಿರುತ್ತದೆ.

ಆ) ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ರೂ. 12.56 ಕೋಟಿ ಲಭ್ಯವಿದೆ. ಹೆಚ್ಚುವರಿ ಸಂಪನ್ಮೂಲವನ್ನು ಬಾಂಡ್‌ಗಳನ್ನು ಹೊರಡಿಸುವ ಮೂಲಕ ಅಥವಾ ಇತರ ರೂಪದಲ್ಲಿ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೆ.ಆರ್. ನಗರ ತಾಲ್ಲೂಕು ಚುಂಚನ ಕಟ್ಟೆ ಹೋಬಳಿಯ ತಾಂತ್ರಿಕ ಸೇವಾ ಕೇಂದ್ರಕ್ಕೆ ಹೆಚ್ಚಿನ ಸಿಬ್ಬಂದಿ ಒದಗಿಸುವ ಬಗ್ಗೆ

2268 (2754) : ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿ ತಾಂತ್ರಿಕ ಸೇವಾ ಕೇಂದ್ರದಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);

ಆ) ಈ ಕೇಂದ್ರದ ವ್ಯಾಪ್ತಿಯಲ್ಲಿ ಬರುವಂತೆ ಎಷ್ಟು ಎಕರೆ ರೇಷ್ಮೆ ಕೃಷಿ ಬೆಳೆಯುವಲ್ಲಿ ಪ್ರಗತಿ ಸಾಧಿಸಲಾಗಿದೆ;

ಇ) ಪ್ರಗತಿ ಕಡಿಮೆ ಬಂದಿದ್ದಲ್ಲಿ ಕಡಿಮೆಯಾಗಲು ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ;